ಚಿಟ್ಟೆ ಹೂ ಮುಟ್ಟುತ್ತಿಲ್ಲ. ಹತ್ತಿರವೂ ಹೋಗುತ್ತಿಲ್ಲ, ಹೂವಿನ ಮೇಲೆಯೂ ಹೋಗಿ ಕುಳಿತುಕೊಳ್ಳುತ್ತಿಲ್ಲ. ಇದೇಕೆ ಹೀಗೆ ಮಾಡುತ್ತಿದೆ ಎನಿಸಿತು. ಚಿಟ್ಟೆ ಮೇಲಕ್ಕೆ ಹಾರುವ ಮೊದಲು ಹೂಗಳ ಸುತ್ತ ನಾಲ್ಕಾರು ಬಾರಿ ಗಿರಕಿ ಹೊಡೆದು ಹಾರಿ ಹೋಯಿತು. ಸ್ವಲ್ಪ ಹೊತ್ತು ಕಳೆದಿರಬೇಕು. ನೂರಾರು ಚಿಟ್ಟೆಗಳ ದಂಡೇ ಹಾರಿ ಬಂತು, ಒಂದಕ್ಕಿಂತ ಒಂದು ಚಂದ, ಹಳದಿ ಚಿಟ್ಟೆಗಳು, ಕೆಂಪು, ಕರಿ ಪಟ್ಟೆಯ ಚಿಟ್ಟೆಗಳು ಚುಕ್ಕಿಚುಕ್ಕಿ ಚಿಟ್ಟೆಗಳು, ಶ್ವೇತವರ್ಣದ ಚಿಟ್ಟೆ, ನೀಲಿ ಜುಟ್ಟಿನ ಚಿಟ್ಟೆ, ದೊಣ್ಣೆಯಂತ ಉದ್ದ ಕಣ್ಣಿನ ಚಿಟ್ಟೆ, ಚಿನ್ನು ಆಶ್ಚರ್ಯಚಕಿತಳಾಗಿ ನಿಂತಳು. ಆಗ ಎಲ್ಲ ಚಿಟ್ಟೆಗಳು ಒಂದೊಂದೇ ಗುಲಾಬಿ ಹೂವಿನ ಮೇಲೆ ಮೆಲ್ಲಗೆ ಕುಳಿತುಕೊಂಡು ನಟನೆ ಮಾಡಿದವು. ಆದರೆ ಬಾಗಿ ಗುಲಾಬಿ ಹೂವಿನ ಮಕರಂದ ಹೀರಿ ಹೀರಿ ಕುಡಿದು ಮತ್ತೇ ಮೇಲೆ ಜಿಗಿದು ಕೆಳಗೆ ಇಳಿದು, ಹೂವಿನ ಹತ್ತಿರ ಸುತ್ತಿ ಮತ್ತೇ ಮುತ್ತುಕೊಟ್ಟು ಹಾರಿಹೋದವು. ನೋಡುವಷ್ಟರಲ್ಲಿಯೇ ನೂರಾರು ಚಿಟ್ಟೆಗಳು ಮಂಗಮಾಯವಾದವು.

ಒಂದು ಚಿಟ್ಟೆ ಹಿಡಿದೇ ಬಿಡುವಾ? ಎಲ್ಲಿಂದ ಬಂದವು ಇವೆಲ್ಲ ಇಲ್ಲಿ ಎಲ್ಲಾದರೂ ಚಿಟ್ಟೆ ಗೂಡಿದೆಯಾ ಎಂದ ಚಿನ್ನು ಹಿಡಿಯಲು ನೋಡಿದರೆ, ಇವಳ ಕೈಗೆ ಸಿಗದ ಚಿಟ್ಟೆಗಳು ಎತ್ತರ ಎತ್ತರ ಹಾರಿ ಹೊರಟೇ ಹೋದವು. ಏನಾಯಿತೆಂದು ಚಿಟ್ಟೆ ಹಾರಿ ಹೋದ ಕಡೆ ನೋಡುತ್ತಿದ್ದವಳ ಕಿವಿಗೆ ಮೃದು ನಲುಮೆಯ ಮಾತುಗಳು ಕೇಳಿದವು. ನೋಡಿದೆಯಾ ಗುಲಾಬಿ..! ಆ ಚಿಟ್ಟೆಗಳ ಸಹಬಾಳ್ವೆ. ಬಂದ ಒಂದೇ ಚಿಟ್ಟೆ ನನ್ನ ಮಕರಂದ ಹೀರಿ ಖುಷಿಯಿಂದ ಮಧು ಕುಡಿದು ಹಾರಿ ಹೋಗುತ್ತದೆ ಎಂದು ಭಾವಿಸಿದ್ದೆ, ಆದರೆ ಹಾರಿ ಹೋಗಿ ತನ್ನೆಲ್ಲ ಬಳಗ ಕರೆತಂದು ಎಲ್ಲರಿಗೂ ಮಕರಂದ ಕುಡಿಸಿ ಕರೆದುಕೊಂಡು ಹೋಯಿತು. ನನಗಂತೂ ಬಲು ಖುಷಿಯಾಯಿತು. ಈ ಹುಡುಗಿ ನೋಡು ತನ್ನ ಸ್ನೇಹಿತನಿಗೇ ಹೂ ಕೊಡಲಿಲ್ಲ, ಬೈದು ಕಳಿಸಿದಳು. ಹಂಚಿ ಉಣ್ಣುವ ಕರೆದುಕೊಡುವ ಗುಣ ಇವಳಿಗೆ ಆ ಚಿಟ್ಟೆಗಳೇ ಕಲಿಸಬೇಕು ಎಂದ ಮಾತಿಗೆ ಗುಲಾಬಿ ಗಿಡವೇ ಮಾತಾಡಿ ಸುಮ್ಮನಾಯಿತು. ಗುಲಾಬಿ ಗಿಡಗಳು ಒಮ್ಮೆಲೇ ಹೌದೆಂದು ಗೋಣು ಹಾಕಿದವು. ತಕ್ಷಣ ಚಿನ್ನುಗೆ ತಿಳಿಯಿತು. ಹೌದು ಅದಕ್ಕೆ ಎಲ್ಲಾ ಚಿಟ್ಟೆಗಳು ಒಮ್ಮೆಲೇ ಹಾರಿಬಂದವು. ಚಿಟ್ಟೆ ಕರೆತಂದು ಎಲ್ಲರಿಗೂ ಗುಲಾಬಿ ತೋರಿಸಿದರೆ, ಗುಲಾಬಿ ಹೂಗಳು ಒಂದೂ ನಿರಾಕರಿಸದೇ ಎಲ್ಲಾ ಚಿಟ್ಟೆಗಳಿಗೂ ಮಧುರಸ ನೀಡಿದವು. ನಾನು ಮಾತ್ರ ನನ್ನ ಗೆಳೆಯನಿಗೆ ಒಂದೂ ಗುಲಾಬಿ ನೀಡಲಿಲ್ಲ. ಛೇ..... ಎಂದು ಸಪ್ಪೆ ಮುಖ ಮಾಡಿ ನಿಂತಳು.

ನಂತರ ತಾನೇ ಹರ್ಷಿತನ ಮನೆಗೆ ಓಡಿ ಹೋಗಿ ಬಾ.. ಹರ್ಷಿತ, ನಿನಗೆ ಗುಲಾಬಿ ಕೊಡುವೆ ಎಂದು ಕೈ ಹಿಡಿದು ಕರೆತಂದಳು. ಹೂವೆಂದರೆ ಪ್ರಾಣ ಬಿಡುವ ಹರ್ಷಿತ ಆಗಲೇ ಗುಂಡಿ ತೋಡಿ ಗುಲಾಬಿ ಗಿಡ ನೆಟ್ಟು ನೀರೆರೆಯುತ್ತಿದ್ದ. ಹೂ ಮುಂದೆ ನಿಂತ ಕಿತ್ತುಕೋ ಎಂದು ಬಾಗಿ ಹರಿಯಲು ಹೋದ ಚಿನ್ನುಗೆ ಬೇಡ ಚಿನ್ನು ನಾನು ಗುಲಾಬಿ ಚಿತ್ರ ಬಿಡಿಸಿದೆ. ಅದು ಗಿಡದಲ್ಲಿಯೇ ಇರಲಿ.. ಎಂದ. ಆದರೂ ಕೇಳದ ಚಿನ್ನು ಒಂದು ಹೂ ತೆಗೆದು ಅವನ ಕೈಗೆ ಕೊಟ್ಟಳು. ಅವನು ಅದಕ್ಕೊಂದು ಪಪ್ಪಿ ಕೊಟ್ಟು ಎದೆಮೇಲೆ ಸಿಕ್ಕಿಸಿಕೊಂಡ. ಗುಲಾಬಿ ಮತ್ತು ಚಿಟ್ಟೆಯ ಸಹಬಾಳ್ವೆ ಚಿನ್ನುಗೆ ಪಾಠ ಕಲಿಸಿತು.

■



ಮಂಜುನಾಥ ಹುಲುಕೊಪ್ಪದ

# ನೆಹರೂ ಬರೆದ ಪತ್ರ

■ **ಅರವಿಂದ ಚೊಕ್ಕಾಡಿ**

ನೆಹರೂ ಬರೆದೊಂದು ಪತ್ರ
ಮಕ್ಕಳಿಗಾಗಿ
ಚಾಚಾ ನೆಹರೂ ಬರೆದೊಂದು ಪತ್ರ /ಪ/

ನಿಮ್ಮೊಡನಾಟದಲ್ಲಿ
ನಗುನಗುತ ಕಳೆವಲ್ಲಿ
ಮರೆತೆ ನನ್ನ ವಯಸನಿಂದು
ಬೆರೆತೆ ನಾನು ನಿಮ್ಮೊಡನಿಂದು /ನೆಹರೂ/

ಪ್ರೋತ್ಸಾಹದ ಮಾತಿನಿಂದ
ಉಲ್ಲಾಸದ ಹಿಗ್ಗಿನಿಂದ
ಜ್ಞಾನಿಯು ನಾನಾದೆನೆಂದು
ನನ್ನೊಳಗೆ ನಾನಂದು
ಕಂಡಿದ್ದು ಕನಸನ್ನು
ನೋಡಿದ್ದು ಸತ್ಯವನ್ನು /ನೆಹರೂ/

ಈ ಬದುಕು ಸುಂದರವೆಂದು
ತಿಳಿಯದಾದ ಹಿರಿಯರು ಇಂದು
ಹೇಳಿದ್ದು ವಾದ
ಮಾಡಿದ್ದು ವಿವಾದ
ಕಳೆದದ್ದು ಸ್ವಂತಿಕೆಯನ್ನು
ಜೀವಂತಿಕೆಯನ್ನು /ನೆಹರೂ/

ಜಾತಿಧರ್ಮವೆಂದು
ಪ್ರಾಂತ್ಯಭಾಷೆಯೆಂದು
ಬಡವ–ಸಿರಿವಂತನೆಂದು
ಕಟ್ಟಿರುವೆವು ಗೋಡೆಗಳ
ನಮಗೆ ನಾವು ಹಿಂದುಮುಂದು
ಕೊಳೆವೆವು ಅದಕಾಗಿ
ಸವೆವೆವು ಇದಕಾಗಿ
ಕಟ್ಟಿಕೊಂಡ ಸೆರೆಯಲಿಂದು
ಬೆಳೆದಾಗ ತಿಳಿವುದು ನಿಮಗೆಂದು /ನೆಹರೂ/

ನಂಬುವೆ ನಾ ನಿಮ್ಮನಿಂದು
ನಿಮ್ಮ ದಾರಿ ನಿಮ್ಮದು ಎಂದು
ನನ್ನ ನಿಮ್ಮ ನಡುವೆ ಬಾಪೂಜಿಯ
ಪಾಠವೆಂದು
ಗೋಡೆಗಳಾ ಒಡೆಯಲಿ
ಸಂಕೋಲೆಗಳಾ ತರಿಯಲಿ /ನೆಹರೂ/

ಈ ನಮ್ಮ ದೇಶಕೆ ನಿಸ್ವಾರ್ಥದ ಸೇವೆಗೆ
ಅಳಿಲಾಗಿ ಬನ್ನಿ
ನೆಳಲಾಗಿ ಬನ್ನಿ
ಪ್ರೀತಿಯಿಂದ ಆಲಿಸಿ
ದ್ವೇಷ ಭಾವ ಸೋಲಿಸಿ
ಕಟ್ಟೋಣ ನಾವು ನವ ಭಾರತ
ಕಟ್ಟೋಣ ನಾವು ನವ ಭಾರತ /ನೆಹರೂ/

(1949ರ ಡಿಸೆಂಬರ್ 2ರಂದು ನೆಹರೂ ಮಕ್ಕಳಿಗೆ ಬರೆದ ಪತ್ರ ಈ ಕವಿತೆಯ ವಸ್ತು)